ಕನ್ನಡ ಪೋಸ್ಟ್
ಸಂಪಾದಕ : ಮಂಜು ಬನವಾಸೆ
KANNADA POST
ಇದು ಸುದ್ದಿ ವಿಲಾಸ
ಕನ್ನಡ ದಿನಪತ್ರಿಕೆ
ಹಾಸನ | E-mail : kannadapostnews@gmail.com | / ಕನ್ನಡ post | Price: ₹1
Vol.No.01 | Issue. 296 | Pages. 2 | Date: 17-10-2025, FRIDAY | RNI NO: KARKAN/2024/89601 | Kannada Daily
ಸಂಪುಟ : 01 - ಸಂಚಿಕೆ : 296 - ಪುಟಗಳು : 2 17-10-2025 ಶುಕ್ರವಾರ | Ph: 8762954248 | ದರ : ₹1

# 7 ದಿನಕ್ಕೆ 11.30 ಲಕ್ಷ ದಾಟಿದ ಹಾಸನಾಂಬೆಯ ಭಕ್ತರ ಸಂಖ್ಯೆ

## ತುಂಬಿ ತುಳುಕಿದ ದರ್ಶನ ಸಾಲುಗಳು। ನಿಯಂತ್ರಣಕ್ಕೆ ಹರಸಾಹಸ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಹಾಸನಾಂಬೆ ದರ್ಶನಕ್ಕೆ ಭಕ್ತರು ಸಾಗರದೋಪಾದಿಯಲ್ಲಿ ಹರಿದು ಬರುತ್ತಿದ್ದು, ಬುಧವಾರ ಒಂದೇ ದಿನ ಸುಮಾರು 2.46 ಲಕ್ಷ ಜನ ಹಾಸನಾಂಬೆ ದರ್ಶನ ಪಡೆದಿದ್ದಾರೆ.

ಈ ಮೂಲಕ ಇಲ್ಲಿಯವರೆಗೆ ಒಟ್ಟು 11.30 ಲಕ್ಷ ಜನರು ದೇವಾಲಯಕ್ಕೆ ಭೇಟಿ ನೀಡಿದ್ದಾರೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣ ಬೈರೇಗೌಡ ಮಾಹಿತಿ ನೀಡಿದ್ದಾರೆ.

ನಿನ್ನೆ ದರ್ಶನ ಸಾಕಷ್ಟು ವೇಗವಾಗಿತ್ತು. ಇಂದು ಬೆಳಿಗ್ಗೆಯಿಂದಲೇ ಭಾರೀ ಜನಸಂದಣಿ ಉಂಟಾಗಿತ್ತು. ಜನರ ಸಾಲು ಧರ್ಮ ದರ್ಶನ ಮತ್ತು 300 ಟಿಕೆಟ್ ಎರಡೂ ಮಾರ್ಗಗಳು ಬ್ಯಾರಿಕೇಡ್ ಪ್ರದೇಶವನ್ನು ದಾಟಿ ಬೀದಿಗಳಿಗೆ ವಿಸ್ತರಿಸಿವೆ ಎಂದು ಹೇಳಿದ್ದಾರೆ. ಜನರು ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಇಂದು ಧರ್ಮ ದರ್ಶನಕ್ಕೆ ಸುಮಾರು ಸಂಜೆ 4 ಗಂಟೆ ಆಚೆ-ಈಚೆವರೆಗೂ ಅಧಿಕ ಸಮಯ ತೆಗೆದುಕೊಳ್ಳುವ ಸಾಧ್ಯತೆ ಇದೆ ಎಂದು ತಿಳಿಸಿದ್ದಾರೆ.

ಮುಂದಿನ ದಿನಗಳಲ್ಲೂ ಇದೇ ರೀತಿಯ ಪ್ರವೃತ್ತಿ ಮುಂದುವರಿಯಲಿದೆ. ದಿನೇ ದಿನೆ ಜನಸಂದಣಿ ಹೆಚ್ಚಾಗುತ್ತಲೇ ಇರುತ್ತದೆ. ದರ್ಶನದ ಸಮಯವೂ ಹೆಚ್ಚಾಗಲಿದೆ. ಸಾಮಾನ್ಯವಾಗಿ, ಕಳೆದ ವರ್ಷಕ್ಕೆ ಹೋಲಿಸಿದರೆ ಈ ವರ್ಷ ಎರಡು ಪಟ್ಟು ಜನಸಂದಣಿ ಹೆಚ್ಚಾಗಿದೆ. ಕಳೆದ ವರ್ಷ ದರ್ಶನಕ್ಕೆ 10-15 ಗಂಟೆಗಳು ದರ್ಮ ದರ್ಶನ ಸಾಲು ಪೂರ್ಣಗೊಳಿಸಬೇಕು ಬೇಕಾಗಿತ್ತು.

ಈ ಬಾರಿ ನಾವು ಆ ಸಮಯವನ್ನು 4-5 ಗಂಟೆಗಳಿಗೆ ಇಳಿಸಿದ್ದೇವೆ. ಆದರೂ, ದುಪ್ಪಟ್ಟು ಜನಸಂದಣಿ ಇದೆ. ಹೀಗಾಗಿ ಭಕ್ತಾದಿಗಳು ಹೆಚ್ಚಿನ ಸಮಯಕ್ಕೆ ಸಿದ್ಧರಾಗಲು ಅವರು ವಿನಂತಿಸಿದ್ದಾರೆ.

ನೀವು ದೇವಸ್ಥಾನ ಪ್ರವೇಶಿಸಿ ವೇದಿಕೆಗೆ ಹೋಗುವಾಗ ದೇವಿಯ ದರ್ಶನವಾಗುತ್ತದೆ. ನೀವು ದರ್ಶನ ತೆಗೆದುಕೊಳ್ಳುವಾಗ, ದಯವಿಟ್ಟು ಮುಂದೆ ಚಲಿಸುತ್ತಲೇ ಇರಿ. ದೇವಾಲಯದ ಎಡ ಮತ್ತು ಬಲ ಎರಡೂ ಭಾಗಗಳಲ್ಲಿ ನಿರ್ಗಮನಗಳಿವೆ.

ಅಡ್ಡಲಾಗಿ ದಾಟಬೇಡಿ ಅಥವಾ ನಿಮ್ಮ ಮತ್ತು ಇತರರ ಸಮಯ ವ್ಯರ್ಥ ಮಾಡಬೇಡಿ. ನೀವು ವೇಗ ಕಡಿಮೆ ಮಾಡಿದರೆ ಅಥವಾ ನಿಲ್ಲಿಸಿದರೆ ನಮ್ಮ ಸಿಬ್ಬಂದಿ ನಿಮ್ಮನ್ನು ತಳ್ಳುತ್ತಾರೆ.

ನೀವು ಚಲಿಸುತ್ತಲೇ ಇದ್ದರೆ ಅವರು ನಿಮ್ಮನ್ನು ತಳ್ಳುವುದಿಲ್ಲ. ಒಂದು ದಿನದಲ್ಲಿ 3 ಲಕ್ಷ ಜನರಿಗೆ ದರ್ಶನ ನೀಡುವುದು ಸವಾಲಿನ ಕೆಲಸ. ಸಾರ್ವಜನಿಕರ ಹಿತದೃಷ್ಟಿಯಿಂದ ನಾವು ನಿಮ್ಮ ಸಹಕಾರ ಕೋರುತ್ತೇವೆ ಎಂದಿದ್ದಾರೆ.

### ಹಲವರ ಭೇಟಿ

ಮುಂಜಾನೆಯಿಂದಲೇ ತಂಡೋಪ ತಂಡವಾಗಿ ಆಗಮಿಸಿ ದರ್ಶನ ಪಡೆಯುತ್ತಿದ್ದಾರೆ. ಇಂದು ಹೆಚ್ಚಿನ ಸಂಖ್ಯೆಯಲ್ಲಿ ಗಣ್ಯರು ಆಗಮಿಸಿಲ್ಲ.

ಹೈಕೋರ್ಟ್ ನ್ಯಾಯ ಮೂರ್ತಿಗಳು, ಲೋಕಾಯುಕ್ತರು, ದಾವಣಗೆರೆ ಸಂಸದರಾದ ಪ್ರಭಾ ಮಲ್ಲಿಕಾರ್ಜುನ್, ಕೆ.ಆರ್.ಪೇಟೆ ಶಾಸಕ ಮಂಜುನಾಥ್, ವಿಧಾನ ಪರಿಷತ್ ಸದಸ್ಯರಾದ ಭೋಜೇಗೌಡ, ಎಂ.ಕೆ.ಪ್ರಾಣೇಶ್, ಮಾಜಿ ಸಚಿವ ಸಿ.ಟಿ.ರವಿ, ಕರವೇ ರಾಜ್ಯಾಧ್ಯಕ್ಷ ಟಿ.ಎ.ನಾರಾಯಣಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷ ಡಾ.ಪುಷ್ಪ ಅಮರನಾಥ್ ,ಚಿತ್ರನಟಿ ನೀತು ಮೊದಲಾದವರು ಕುಟುಂಬ ಸಮೇತರಾಗಿ ಆಗಮಿಸಿ ಹಾಸನಾಂಬೆ-ಸಿದ್ದೇಶ್ವರಸ್ವಾಮಿ ದರ್ಶನ ಪಡೆದು ವಿಶೇಷ ಪೂಜೆ ಸಲ್ಲಿಸಿದರು. ಜಿಲ್ಲೆ ಮಾತ್ರವಲ್ಲದೆ ಹೊರ ಜಿಲ್ಲೆ, ರಾಜ್ಯಗಳಿಂದಲೂ ಹೆಚ್ಚಿನ ಸಂಖ್ಯೆಯಲ್ಲಿ ಭಕ್ತರು ದೇವಿಯ ದರ್ಶನಕ್ಕೆ ಆಗಮಿಸುತ್ತಿದ್ದಾರೆ.

ಶಿಷ್ಟಾಚಾರ ಕಿರಿಕಿರಿ: ಈ ನಡುವೆ ಇಂದು ಮಧ್ಯಾಹ್ನದ ವರೆಗೆ 4+1 ಶಿಷ್ಟಾಚಾರ ನಿಯಮದಡಿ ಗಣ್ಯರು ಆಗಮಿಸುತ್ತಿದ್ದುದರಿಂದ, ಅವರೆಲ್ಲರೂ ಗರ್ಭಗುಡಿ ಪ್ರವೇಶ ಮಾಡುತ್ತಿದ್ದುದರಿಂದ ಈ ವೇಳೆ ಸಾರ್ವಜನಿಕ ದರ್ಶನಕ್ಕೆ ಅಡ್ಡಿಯಾಗಿತ್ತು. ಶಿಷ್ಟಾಚಾರ ವ್ಯವಸ್ಥೆಯಡಿ ಗಣ್ಯರು ಬರುವಾಗ ಸಾಮಾನ್ಯ ಸರತಿ ಸಾಲು ನಿಂತಲ್ಲೇ ನಿಲ್ಲಬೇಕಾಗಿತ್ತು. ಇದು ಅನೇಕರಿಗೆ ತಲೆ ನೋವಾಗಿತ್ತು.





ದಾವಣಗೆರೆ ಲೋಕಸಭಾ ಸದಸ್ಯರಾದ ಪ್ರಭಾ ಮಲ್ಲಿಕಾರ್ಜುನ್ ಅವರು ಇಂದು ಹಾಸನಾಂಬೆ ಹಾಗೂ ಶ್ರೀ ಸಿದ್ದೇಶ್ವರಸ್ವಾಮಿ ಜಾತ್ರಾ ಮಹೋತ್ಸವಕ್ಕೆ ಆಗಮಿಸಿ ದೇವರ ದರ್ಶನ ಪಡೆದರು. ಅವರನ್ನು ನಗರದ ಪ್ರವಾಸಿ ಮಂದಿರದಲ್ಲಿ ಹಾಸನ ಸಂಸದ ಶ್ರೇಯಸ್ ಎಂ.ಪಟೇಲ್ ಅವರು ಸನ್ಮಾನಿಸಿ ಆತ್ಮೀಯ ಸ್ವಾಗತ ಕೋರಿದರು.

## ಮೈಕ್ ಹಿಡಿದು ನಿಂತ ಡಿಸಿ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನಾಂಬೆ ದರ್ಶನಕ್ಕೆ ಭಕ್ತ ಆಗಮನ ನಿರೀಕ್ಷೆಗೂ ಮೀರಿ ಹೆಚ್ಚಾಗಿರುವ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಅವರೇ ಭಕ್ತರ ನಿಯಂತ್ರಣಕ್ಕೆ ನಿಂತಿದ್ದಾರೆ. ಭಕ್ತರನ್ನು ನಿಯಂತ್ರಿಸಲು ಅಧಿಕಾರಿಗಳು ಪೊಲೀಸರು ಹರಸಾಹಸ ಪಡುತ್ತಿದ್ದಾರೆ.

ಭಕ್ತರಿಗೆ ಹಾಸನಾಂಬ ದೇವಿ ಸುಗಮ ದರ್ಶನ ಮಾಡಿಸಲು ಡಿಸಿ ಅವರು ಖುದ್ದು ಫೀಲ್ಡ್‌ಗಿಳಿದಿದ್ದಾರೆ. ದೇವಾಲಯದ ಮುಂಭಾಗ ನಿಂತು ಮೈಕ್‌ನಲ್ಲಿ ಅನೌನ್ಸ್ ಮಾಡಿದ ಜಿಲ್ಲಾಧಿಕಾರಿ ಅವರು, ದೇವಸ್ಥಾನ ಬಾಗಿಲು ಬಳಿಯಿಂದಲೇ ದೇವರನ್ನು ನೋಡುತ್ತಾ ಹೋಗಿ, ಯಾರೂ ನಿಲ್ಲಬೇಡಿ, ಭಕ್ತರ ಸಂಖ್ಯೆ ಜಾಸ್ತಿ ಇದೆ. ಒಬ್ಬರು ನಿಂತರೆ ಎಲ್ಲರಿಗೂ ತೊಂದರೆ ಆಗುತ್ತದೆ. ಬೇಗ ಬೇಗ ಹೋಗಿ ದೇವರ ದರ್ಶನ ಪಡೆಯಿರಿ ಎಂದು ಮೈಕ್ ಹಿಡಿದು ಅನೌನ್ಸ್ ಮಾಡಿದರು.



ಭಕ್ತರು ಸಂಖ್ಯೆ ಹೆಚ್ಚಾದ ಹಿನ್ನಲೆ ಸಿದ್ದೇಶ್ವರಸ್ವಾಮಿ ದೇವಾಲಯದ ಎದುರಿನ ಬಾಗಿಲನ್ನು ಕೆಲಹೊತ್ತು ಬಂದ್ ಮಾಡಲಾಗಿತ್ತು. ಈ ವೇಳೆ ಜಮಾಯಿಸಿದ್ದ ಭಕ್ತರು, ದಯಮಾಡಿ ಬಾಗಿಲು ತೆರೆಯಿರಿ ಎಂದು ಡಿಸಿ ಅವರಿಗೆ ಮನವಿ ಮಾಡಿದರು. ನಂತರ ಸಿದ್ದೇಶ್ವರಸ್ವಾಮಿ ದೇವಾಲಯದ ಬಾಗಿಲು ತೆರೆಸಿದ ಡಿಸಿ, ಎಲ್ಲರೂ ದರ್ಶನ ಮಾಡಲು ಅವಕಾಶ ಮಾಡಿಕೊಟ್ಟರು.



## ಅವಳಿ ಮಕ್ಕಳೊಂದಿಗೆ ದರ್ಶನ

ಸಂಸದ ಶ್ರೇಯಸ್ ಪಟೇಲ್ ದಂಪತಿ ಅವಳಿ ಮಕ್ಕಳನ್ನು ಎತ್ತಿಕೊಂಡು ಬಂದು ಹಾಸನಾಂಬೆಯ ದರ್ಶನ ಪಡೆದರು. ಎಳೆಯ ಕಂದಮ್ಮಗಳನ್ನು ಸಂಸದರು ಹಾಗೂ ಪತ್ನಿ ಎತ್ತಿಕೊಂಡು ತಾಯಿ ಅನುಪಮಾ ಜೊತೆ ಶ್ರೇಯಸ್ ಆಗಮಿಸಿದ್ದರು. ಈ ವೇಳೆ ಮಾತನಾಡಿದ ಅವರು, ಕಳೆದ ಬಾರಿ ದಂಪತಿ ದರ್ಶನಕ್ಕೆ ಬಂದಿದ್ದೆವು. ಈ ಬಾರಿ ನಾಲ್ಕು ಜನ ಬಂದಿದ್ದೇವೆ ಎಂದು ಖುಷಿ ವ್ಯಕ್ತಪಡಿಸಿದರು. ಇದಕ್ಕೂ ಮುನ್ನ ಪ್ರವಾಸಿ ಮಂದಿರದಿಂದ

ಶಿಷ್ಟಾಚಾರ ವಾಹನದಲ್ಲೇ ಸಂಸದರು ಹಾಗೂ ಕುಟುಂಬ ಸದಸ್ಯರು ಆಗಮಿಸಿದರು.

# ಶಕ್ತಿ ಯೋಜನೆ ಜಾರಿಗೊಳಿಸಿದ್ದು ಸಾರ್ಥಕ ಎನಿಸಿದೆ



ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಶಕ್ತಿ ಯೋಜನೆಯಿಂದ ರಾಜ್ಯದ ವಿವಿಧ ಮೂಲೆಗಳಿಂದ ಹಾಸನಾಂಬ ದರ್ಶನಕ್ಕೆ ಮಹಿಳಾ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುತ್ತಿದ್ದಾರೆ. ಶಕ್ತಿ ಯೋಜನೆ ಜಾರಿಗೊಳಿಸಿದ್ದು ಸಾರ್ಥಕವಾಗಿದೆ ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಹೇಳಿದರು.

ಗುರುವಾರ ಸರದಿ ಸಾಲಿನಲ್ಲಿ ಬಂದು ಹಾಸನಾಂಬ ದರ್ಶನ ಪಡೆದು ಸುದ್ದಿಗಾರರೊಂದಿಗೆ ಮಾತನಾಡಿ,

ಈ ಬಾರಿ ಜಿಲ್ಲಾಡಳಿತ ಉತ್ತಮ ವ್ಯವಸ್ಥೆ ಮಾಡಿದೆ. ನಾನು ಉತ್ತರ ಕರ್ನಾಟಕದವಳಾದರೂ ಹಾಸನಾಂಬ ಮಹಾತ್ಮೆ ಕೇಳಿದ್ದೇನೆ.

ವಿಶ್ವದಾದ್ಯಂತ ಹಾಸನಾಂಬಗೆ ಭಕ್ತರಿದ್ದಾರೆ. ಮಧ್ಯಾಹ್ನ 12 ಗಂಟೆ ನಂತರ ಬಂದರೆ ಶಿಷ್ಟಾಚಾರದ ವಾಹನಗಳಲ್ಲಿ ಕರೆದೊಯ್ಯಲು ಸಾಧ್ಯವಾಗುವುದಿಲ್ಲ, ಸಾವಿರ ರೂ. ಟಿಕೆಟ್ ಸಾಲಿನಲ್ಲಿ ತೆರಳಬೇಕಾಗುತ್ತದೆಂದು ಹೇಳಿದ್ದರು. ಹಾಸನಾಂಬ ತಾಯಿ ಎಷ್ಟು ಗಂಟೆಗೆ ಕರೆಸಿಕೊಳ್ಳುತ್ತಾಳೋ ಅಷ್ಟು ಗಂಟೆಗೆ ಬರುತ್ತೇನೆಂದು ಜಿಲ್ಲಾಧಿಕಾರಿಗೆ ಹೇಳಿದ್ದೆ. ದೇವಿ ಮುಂದೆ ಸಚಿವರು, ಸಾಮಾನ್ಯರು ಎಂಬ ತಾರತಮ್ಯ ಸರಿಯಲ್ಲ.

ಸಾವಿರ ರೂಪಾಯಿ ಸಾಲಿನಲ್ಲಿ ಬಂದಿದ್ದೇನೆಂದರು. ಉತ್ತಮ ಮಳೆಯಾಗಿ ರೈತರು ಸಂತೋಷದಿಂದ ಇರಲಿ. ಬೆಳೆಗೆ ಒಳ್ಳೆಯ ಬೆಲೆ ದೊರೆಯಲಿ. ನಮ್ಮ ದೇಶದ ಮೇಲೆ ಯಾವುದೇ ಕರಿನೆರಳು ಬೀಳಬಾರದು. ಎಂದು ದೇವಿಯಲ್ಲಿ ಪ್ರಾರ್ಥಿಸಿದ್ದೇನೆ ಎಂದರು.

ಗೃಹಲಕ್ಷ್ಮೀ ಹಣ ಪಾವತಿ ಸಕಾಲಕ್ಕೆ ಆಗುತ್ತಿದೆ. ಜುಲೈ ತಿಂಗಳ ಹಣ ಮೂರ್‍ನಾಲ್ಕು ದಿನಗಳ ಹಿಂದೆ ಜಮೆಯಾಗಿದೆ.

ಆಗಸ್ಟ್ ತಿಂಗಳ ಹಣ ದೀಪಾವಳಿ ಒಳಗೆ ಬಿಡುಗಡೆಯಾಗುತ್ತದೆಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

## ಸಾಮಾನ್ಯ ಭಕ್ತರಂತೆ ಬಂದ ಸಚಿವೆ

ಹಾಸನ: ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಾವಿರ ರೂ. ಟಿಕೆಟ್ ಖರೀದಿಸಿ ಭಕ್ತರೊಂದಿಗೆ ಸರದಿ ಸಾಲಿನಲ್ಲಿ ಬಂದು ದೇವಿ ದರ್ಶನ ಪಡೆದರು.

ರಾತ್ರಿ 8 ಗಂಟೆಗೆ ನಗರಕ್ಕೆ ಆಗಮಿಸಿದ ಅವರು ಕುಟುಂಬಸ್ಥರು ಹಾಗೂ ಆಪ್ತ ಸಹಾಯಕರಿಗೆ ಸಾವಿರ ರೂ. ಟಿಕೆಟ್ ಖರೀದಿಸಿ ಸರದಿ ಸಾಲಿನಲ್ಲಿ ಹೆಜ್ಜೆ ಹಾಕಿದರು. ಈ ವೇಳೆ ಜಿಲ್ಲಾಧಿಕಾರಿ ಕೆ.ಎಸ್. ಲತಾಕುಮಾರಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮೊಹಮ್ಮದ್ ಸುಜೀತಾ ಅವರು ಸರದಿ ಸಾಲಿನಲ್ಲೇ ಬ್ಯಾರಿಕೇಡ್ ತೆರೆದು ದಾರಿ ಮಾಡಿಕೊಡುವುದಾಗಿ ಹೇಳಿದರಾದರೂ, ಹಾಸನಾಂಬ ತಾಯಿ ಮುಂದೆ ಎಲ್ಲರೂ ಒಂದೇ. ಜನರೊಂದಿಗೆ ಹೋಗುತ್ತೇನೆಂದು ಸಾಗಿದರು. ಅರ್ಧ ದಾರಿ ಕ್ರಮಿಸಿದ ಮೇಲೆ ಜನದಟ್ಟಣೆ ಹೆಚ್ಚಾಗಿ ಸಚಿವರು ನಿಂತಿದ್ದ ಸಾಲು ಮುಂದೆ ಸಾಗದೆ ನಿಲ್ಲಬೇಕಾಯಿತು. ಈ ವೇಳೆ ಜನರನ್ನು ಪಕ್ಕಕ್ಕೆ ಸರಿಸಲು ಪೊಲೀಸರು ಮುಂದಾದಾಗ ಸಾರ್ವಜನಿಕರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ ಮುಂದೆ ಹೋಗಲು ಸಾಧ್ಯವಾಗಲಿಲ್ಲ. ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಸಚಿವರು ಜನರೊಂದಿಗೆ ಹೆಜ್ಜೆ ಹಾಕಿದರು.

# ಬಿಜೆಪಿಯಿಂದ ಡಿಕೆಶಿಕೆಗೆ ಕರೆ ಹೋಗಿಲ್ಲ

## ತಮ್ಮ ಭದ್ರತೆ ಕಾಪಾಡಿಕೊಳ್ಳಲು ಹೀಗೆ ಹೇಳಿರಬಹುದು ಎಂದ ಸಿಟಿಆರ್

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಹಾಸನ: ಬಿಜೆಪಿಯಿಂದ ಕರೆ ಬಂದಿತ್ತು ಎಂಬ ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿಕೆಗೆ, ಅವರು ಇವತ್ತಿನ ಪರಿಸ್ಥಿತಿಯಲ್ಲಿ ತಮ್ಮ ಭದ್ರತೆ ಕಾಪಾಡಿಕೊಳ್ಳಲು ಹೀಗೆ ಹೇಳಿರಬಹುದು ಎಂದು ಮಾಜಿ ಸಚಿವ ಸಿ.ಟಿ.ರವಿ ಹೇಳಿದರು.

ಇಂದು ಕುಟುಂಬ ಸಮೇತರಾಗಿ ಹಾಸನಾಂಬೆ ದರ್ಶನ ಪಡೆದು ನಂತರ ಮಾತನಾಡಿದ ಅವರು, ಅವತ್ತೇ ಅವರು ಹೇಳಬೇಕಿತ್ತು, ಬಂದಿದ್ದರೆ ಅವರು ಮಿಸ್ ಮಾಡಿಕೊಳ್ಳುತ್ತಿರಲಿಲ್ಲ ಎಂದರು.

ರಾಜಕಾರಣಿಗಳು ಎಲ್ಲಾ ಸಂದರ್ಭದಲ್ಲೂ ಸತ್ಯ ಹೇಳುತ್ತಾರೆ ಎಂದು ನೀವು ಬಯಸಬೇಡಿ, ಸಾಂದರ್ಭಿಕವಾಗಿ ಅವರು ಹೇಳಿರಬಹುದು ಎಂದು ವ್ಯಂಗ್ಯ ಆಡಿದರು.

ರಾಜ್ಯದಲ್ಲಿ ಆರ್‌ಎಸ್‌ಎಸ್ ಚಟುವಟಿಕೆಗಳಿಗೆ ನಿರ್ಬಂಧ ವಿಚಾರವಾಗಿ ಪ್ರತಿಕ್ರಿಯಿಸಿ, ಆರ್‌ಎಸ್‌ಎಸ್ ರಾಷ್ಟ್ರದಲ್ಲಿ ನಿಸ್ವಾರ್ಥ ಸೇವೆ ಮಾಡಿಕೊಂಡು ಬಂದಿದೆ. ಐಸಿಎಸ್ ಸಂಘಟನೆಯನ್ನ, ಮತೀಯವಾದ ಮಾಡುವವರನ್ನ, ಜಾತಿ ಜಾತಿ ಹೆಸರಲ್ಲಿ ಸಮಾಜ ಒಡೆಯುವವರನ್ನ ನಿಷೇಧಿಸಿದರೆ ಒಳ್ಳೆಯದಾಗುತ್ತೆ.

ಅದನ್ನು ಬಿಟ್ಟು ರಾಷ್ಟ್ರ ಕಟ್ಟುವ ಸಂಘಟನೆ ನಿರ್ಬಂಧಿಸಿದರೇ ಹೇಗೆ, ರಾಷ್ಟ್ರ ಕಟ್ಟುವ ಸಂಘವನ್ನ ನಿರ್ಬಂಧಿಸುವ ಮನಸ್ಥಿತಿಯನ್ನ ನೀವು ಬದಲಾಯಿಸಿಕೊಳ್ಳಿ ಎಂದು ಕಾಂಗ್ರೆಸ್‌ನವರಿಗೆ ಬುದ್ಧಿವಾದ ಹೇಳಿದರು.

ಇದು ದೇಶದ್ರೋಹ ಮಾಡುವವರಿಗೆ ಅನುಕೂಲ ಆಗುತ್ತೆ, ಅವರಿಗೆ ಅನುಕೂಲ ಮಾಡಿಕೊಡಲು ಹೀಗೆ ಮಾಡುತ್ತಿದ್ದೀರಾ, ಮಲ್ಲಪ್ಪಶೆಟ್ಟಿ ಮಾಡಿದ ಮೋಸದಂತೆ ನೀವು ಮಾಡುತ್ತಿದ್ದೀರಿ, ನಗುನಗುತ್ತಾ ಇದ್ದ ಬುದ್ದನನ್ನ ಪಿರಂಗಿ ಇಟ್ಟು ಉಡಾಯಿಸಿದಿರಲ್ಲಾ ಅದು ಯಾವ ಮನಸ್ಥಿತಿ, ಆರ್‌ಎಸ್‌ಎಸ್ ದೇಶದಲ್ಲಿ ನೈತಿಕ ಶಕ್ತಿ ಕೊಡುತ್ತದೆ, ಸಾಮಾಜಿಕ, ಜಾತಿ, ಅಸ್ಪೃಶ್ಯತೆ ಹೇಳೋದು ಅಪರಾಧ ವಾಗುತ್ತಾ ಎಂದು ಖಾರವಾಗಿ ಪ್ರಶ್ನಿಸಿದರು.

ಆರ್‌ಎಸ್‌ಎಸ್ ಸದಸ್ಯತ್ವಕ್ಕೆ ದುಡ್ಡು ಕೊಡಬೇಕಿಲ್ಲ, ನೀವು ಒಮ್ಮೆ ಶಾಖೆಗೆ ಬಂದು ನೋಡಿ, ನಂತರ ನೀವು ಅದರ ಬಗ್ಗೆ ಮಾತನಾಡಿ, ಕಾಂಗ್ರೆಸ್ ಸೇವಾದಳಕ್ಕೂ ಈಗ ನೂರು ವರ್ಷ ಅದನ್ನ ಯಾರಾದ್ರು ನೆನಪಿಸಿಕೊಳ್ತಾರೆ, ಅದನ್ನ ನೀವು ಕಾಂಗ್ರೆಸ್‌ಗೆ ಬಹುಪರಾಕ್ ಹೇಳೋದಕ್ಕೆ ಮಾಡಿಕೊಂಡ್ರಿ, ಅದನ್ನ ನೀವು ಚೇರ್ ಎತ್ತಿ ಇಟ್ಟು ಕೊಳ್ಳಲು ಬಳಸಿಕೊಂಡ್ರಿ, ಆದ್ರೆ ಆರ್‌ಎಸ್‌ಎಸ್ ಹಾಗೆ ಮಾಡಿಲ್ಲ ಎಂದು ವಾಗ್ದಾಳಿ ನಡೆಸಿದರು.

ಆರ್‌ಎಸ್‌ಎಸ್ ದೇಶದ ಹಿತ ಕಾಯುವ ಕೆಲಸ ಮಾಡಿಕೊಂಡು ಬಂದಿದೆ ಎಂದು ಸಿಟಿಆರ್ ಸಮರ್ಥಿಸಿಕೊಂಡರು. ಇದೇ ವೇಳೆ ಈ ಬಾರಿಯ ಅಚ್ಚುಕಟ್ಟು ವ್ಯವಸ್ಥೆಗೆ ಮೆಚ್ಚುಗೆ ವ್ಯಕ್ತಪಡಿಸಿದ ಅವರು, ಈ ಬಾರಿ ವ್ಯವಸ್ಥೆಯನ್ನ ಅಚ್ಚುಕಟ್ಟಾಗಿ ಮಾಡುವ ಪ್ರಯತ್ನ ಮಾಡಿದ್ದಾರೆ.

ಆದರೆ ಧರ್ಮದರ್ಶನ ಸಾಲಿನಲ್ಲಿ ಜನ 2 ಗಂಟೆ ನಿಲ್ಲುತ್ತಿದ್ದಾರೆ, ಅದರ ಬಗ್ಗೆ ಸ್ವಲ್ಪ ಗಮನ ಕೊಡಬೇಕಿದೆ ಎಂದರು. ಒಟ್ಟಿನಲ್ಲಿ ಕಳೆದ ಬಾರಿಗಿಂತ ಅಚ್ಚುಕಟ್ಟು ವ್ಯವಸ್ಥೆ ಮಾಡಿದ್ದಾರೆ.

ಇದಕ್ಕಾಗಿ ಜಿಲ್ಲಾಡಳಿತಕ್ಕೆ, ಉಸ್ತುವಾರಿ ಸಚುವರಿಗೆ ರವಿ ಅಭಿನಂದನೆ ಸಲ್ಲಿಸಿದರು.



# ಚಿಕಿತ್ಸೆಗೆಂದು ಇಟ್ಟಿದ್ದ ಹಣ-ಆಭರಣ ಕಳವು

ಸಕಲೇಶಪುರ: ಮನೆಯ ಮೇಲ್ಛಾವಣಿಯ ಹೆಂಚು ತೆಗೆದು ಚಿನ್ನಾಭರಣ ಹಾಗೂ ನಗದುಹಣ ಕಳವು ಮಾಡಿರುವ ಘಟನೆ ತಾಲೂಕಿನ ಹೆತ್ತೂರು ಹೋಬಳಿ ಮರಜೇನಹಳ್ಳಿ ಗ್ರಾಮದಲ್ಲಿ ನಡೆದಿದೆ. ಗ್ರಾಮದ ಸುಬ್ಬರಾಯಿಗೌಡ ಎಂಬುವರ ಪತ್ನಿಗೆ ಹೃದಯ ಸಂಬಂಧಿ ಕಾಯಿಲೆ ಇದ್ದುದರಿಂದ ಮೈಸೂರಿನ ಅಪೊಲೋ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸುತ್ತಿದ್ದರು.

ಚಿಕಿತ್ಸೆ ಗಾಗಿ ಸಂಬಂಧಿಕರಿಂದ 3.50 ಲಕ್ಷ ರೂ. ಹಣ ಪಡೆದು ಗೋದ್ರೇಜ್ ಬೀರುವಿನಲ್ಲಿಟ್ಟು ಬೀಗ ಹಾಕಿದ್ದರು. ಸೂಟ್‌ಕೇಸ್‌ನಲ್ಲಿ ನಗದು ಹಾಗೂ ಚಿನ್ನದ ಆಭರಣ ಇಟ್ಟು, ಸೂಟ್‌ಕೇಸನ್ನು ಮಂಚದ ಕೆಳಗಿಟ್ಟಿದ್ದರು.

ಅ.8 ರಂದು ಬೆಳಿಗ್ಗೆ ಪತ್ನಿ ಚಿಕಿತ್ಸೆ ಗಾಗಿ ಮನೆಗೆ ಬೀಗ ಹಾಕಿಕೊಂಡು ಹಾಸನಕ್ಕೆ ತೆರಳಿ ಮಿಷನ್ ಆಸ್ಪತ್ರೆಗೆ ಚಿಕಿತ್ಸೆ ಗೆ ದಾಖಲು ಮಾಡಿದ್ದರು.

ವೈದ್ಯರ ಸಲಹೆ ಮೇರೆಗೆ ಅ.13 ರಂದು ಮೈಸೂರಿನ ಅಪೊಲೋ ಆಸ್ಪತ್ರೆಗೆ ಕಳುಹಿಸಿ ಚಿಕಿತ್ಸೆ ಕೊಡಿಸಿಕೊಂಡು ವಾಪಸ್ ಹಾಸನದ ಸರ್ಕಾರಿ ಆಸ್ಪತ್ರೆಗೆ ಕರೆತಂದು ದಾಖಲು ಮಾಡಿದ್ದರು.

ಅ.14 ರಂದು ಬೆಳಿಗ್ಗೆ 6 ಗಂಟೆ ಸಮಯದಲ್ಲಿ ಮನೆಯ ಬಾಗಿಲಿಗೆ ಬೀಗ ಹಾಕಿಕೊಂಡು ಹಾಸನಕ್ಕೆ ತೆರಳಿದ್ದರು. 15 ರಂದು ಬೆಳಿಗ್ಗೆ 8.30 ಗಂಟೆ ಸಮಯದಲ್ಲಿ ಮನೆಯಲ್ಲಿ ಕಳ್ಳತನ ನಡೆದಿರುವ ವಿಚಾರ ತಿಳಿದು ಬಂದು ನೋಡಿದಾಗ ಮನೆಯ ಮೇಲ್ಭಾಗದ ಹೆಂಚು ತೆಗೆದು ಕಳ್ಳರು ಮನೆಯ ಒಳಗೆ ಪ್ರವೇಶಿಸಿ ಸೂಟ್‌ಕೇಸ್ ನಲ್ಲಿಟ್ಟಿದ್ದ 3.50 ಲಕ್ಷ ರೂ. ನಗದು, ಸುಮಾರು 49 ಗ್ರಾಂ. ತೂಕವುಳ್ಳ ಅಂದಾಜು 3.92 ಲಕ್ಷ ರೂ. ಬೆಲೆಯ 30 ಗ್ರಾಂ. ತೂಕದ ಚಿನ್ನದ ತಾಳಿ ಚೈನ್, 5 ಗ್ರಾಂ. ತೂಕದ ಚಿನ್ನದ ಉಂಗುರ, 4 ಗ್ರಾಂ.ತೂಕದ ಚಿನ್ನದ ಓಲೆಗಳನ್ನು ಕಳವು ಮಾಡಿಕೊಂಡು ಹೋಗಿರುವುದು ಗೊತ್ತಾಗಿದೆ. ಸುಬ್ಬರಾಯಿಗೌಡ ಅವರು ನೀಡಿದ ದೂರಿನ ಮೇರೆಗೆ ಗ್ರಾಮಾಂತರ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ.

# ಇಂಡೋನೇಷ್ಯಾ ಬಾಲಿಯಲ್ಲಿ ಚರಾಪ ತಾಲ್ಲೂಕಿನ ಪ್ರತಿಭೆಗಳ ಅನಾವರಣ

ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್

ಚನ್ನರಾಯಪಟ್ಟಣ: ಇಂಡೋನೇಷ್ಯಾದ ಬಾಲಿಯಲ್ಲಿ ಇತ್ತೀಚೆಗೆ ನಡೆದ 2025ನೇ ಸಾಲಿನ ಅಂತಾರಾಷ್ಟ್ರೀಯ ಸಾಂಸ್ಕೃತಿಕ ಉತ್ಸವದಲ್ಲಿ ಚನ್ನರಾಯಪಟ್ಟಣದ ಭರತನಾಟ್ಯ ಕಲಾವಿದೆ ವಿದುಷಿ ಪಿ.ಶುಭ್ರತಾ ಅವರ ಕಲಾತಂಡದ ಸಾಧನೆ ಪರಿಗಣಿಸಿ ಅವರಿಗ ಕಲಾತಿಲಕ ಬಿರುದು ನೀಡಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಿವಿಧ ದೇಶಗಳಿಂದ ಸುಮಾರು 6 ಕಲಾತಂಡಗಳು ಭಾಗವಹಿಸಿದ್ದವು,



ಭಾರತ ದೇಶದಿಂದ ಕರ್ನಾಟಕ ರಾಜ್ಯದ ಪರವಾಗಿ ಚನ್ನರಾಯಪಟ್ಟಣದ ಖ್ಯಾತ ಭರತನಾಟ್ಯ ಕಲಾವಿದೆ ವಿದುಷಿ ಪಿ. ಶುಭ್ರತಾ ಅವರ ಕಲಾತಂಡ ಅಂತಾರಾಷ್ಟ್ರೀಯ ಮಟ್ಟದಲ್ಲಿ ಉತ್ತಮ ನೃತ್ಯ ರೂಪಕವನ್ನು ಪ್ರದರ್ಶಿಸಿ ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದ ಹಿನ್ನೆಲೆಯಲ್ಲಿ ಇಂಡೋನೇಷ್ಯಾ ಸರ್ಕಾರದ ವತಿಯಿಂದ ಕಲಾ ತಿಲಕ ಬಿರುದು ನೀಡಿ ನೆನಪಿನ ಕಾಣಿಕೆ ಕೊಡುವ ಮೂಲಕ ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಪಿ.ಶುಭ್ರತಾ, ದೇಶದ ಅತ್ಯುನ್ನತ ಕಲೆಯಾದ ಭರತನಾಟ್ಯವನ್ನು ಇಡೀ ವಿಶ್ವವೇ ಪೂಜ್ಯ ಭಾವನೆಯಲ್ಲಿ ಕಾಣುತ್ತಿದೆ. ಇಂಡೋನೇಷ್ಯಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಮ್ಮ ಭರತನಾಟ್ಯ ಕಲೆಯನ್ನು ಮೆಚ್ಚಿ ಇಲ್ಲಿನ ಆಡಳಿತ ವ್ಯವಸ್ಥೆ ತುಂಬು ಹೃದಯದಿಂದ ಅಭಿನಂದಿಸಿ ನಮ್ಮನ್ನು ಸನ್ಮಾನಿಸಿದ್ದಾರೆ. ಅವರ ಅಭಿನಂದನೆಗೆ ನಾವು ತುಂಬಾ ಆಭಾರಿಯಾಗಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಇಂಡೋನೇಷ್ಯಾದ ಬಾಲಿಯ ಸೆನೆಟರ್ ಡಾ. ಈ ಗುಸ್ತಿ ಆರ್ಯವೇದ ಕರ್ಣ, ಮಹೇಂದ್ರ ದತ್ತ ರಾಜ ಹಾಗೂ ಕಾರ್ಯಕ್ರಮದ ರೂವಾರಿಗಳಾದ ದೀಪಾ ರಾವ್, ಮಾಧವ್ ಹಾಗೂ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ವಿದುಷಿ ರೇವತಿ ಕಾಮಂತ್ , ಭರತನಾಟ್ಯ ಕಲಾವಿದರಾದ ಸುಶ್ಮಿತಾ , ಹಾಗೂ ಬಿಂದುಶ್ರೀ ಉಪಸ್ಥಿತರಿದ್ದರು.

